ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 20-02-2017

## ಪತ್ರಿಕಾ ಆಮಂತ್ರಣ

## 1.State credit Seminar 2016-17 by NABARD:

**Chief Guest:**

**Shri Subhash Chandra Khuntia,**
**Chief Secretary, Government of Karnataka**

**Special Guests:**

Shri T M Vijay Bhaskar, IAS
Additional Chief Secretary to GoK cum Development Commissioner

Shri Rajeev Chawla, IAS
Additional Chief Secretary,
Horticulture & Sericulture Department

Maheshwar Rao, IAS
Secretary to Government,
Agriculture Department

**Date: 21-02-2017 Tuesday at 10.00 a.m.**
**Venue: NABARD Towers, 46, Kempe Gowda Road Bangalore 560 009.**

2. ಮೋಟಾರು ವಾಹನಗಳಿಂದಾಗುವ ರಸ್ತೆ ಅಪಘಾತಗಳ ಬಗ್ಗೆ ಅರಿವು ಮೂಡಿಸಲು ವ್ಯಂಗ್ಯ ಚಿತ್ರ ಪ್ರದರ್ಶನ:

ಉದ್ಘಾಟನೆ:
ಶ್ರೀ ರಾಮಲಿಂಗಾರೆಡ್ಡಿ,

ಸಾರಿಗೆ ಸಚಿವರು

ವಿಶೇಷ ಆಹ್ವಾನಿತರು:
ಕುಮಾರಿ ರಮ್ಯ ಬಾರ್ನ್,
ಚಲನಚಿತ್ರ ನಟಿ

ಉಪಸ್ಥಿತರು:
ಡಾ: ಬಿ. ಬಸವರಾಜು, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು,
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ

ದಿನಾಂಕ: 21-02-2017 ಮಂಗಳವಾರ, ಬೆಳಿಗ್ಗೆ 10-00 ಗಂಟೆಗೆ
ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಂಗಳೂರು

**3.ಅಭಿಶಿಕ್ಷಣ ಕಾರ್ಯಾಗಾರ ಮತ್ತು ಪುಸ್ತಕ ಬಿಡುಗಡೆ ಸಮಾರಂಭ:**

**"ಆಂಗ್ಲರ ಆಡಳಿತದಲ್ಲಿ ಕನ್ನಡ" ಹಾಗೂ "ಕನ್ನಡಪರ ಆಜ್ಞೆಗಳು-ಆದೇಶಗಳು" ಕೃತಿ ಬಿಡುಗಡೆ.**

**ಉದ್ಘಾಟನೆ:**

**ಶ್ರೀಮತಿ ಉಮಾಶ್ರೀ.**
**ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ**
**ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು**

**ದಿನಾಂಕ: 21-02-2018 ಮಂಗಳವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ**

**ಸ್ಥಳ: ಕೊಠಡಿ ಸಂಖ್ಯೆ 419, ಸಮ್ಮೇಳನ ಸಭಾಂಗಣ, ವಿಕಾಸಸೌಧ, ಬೆಂಗಳೂರು.**

## 4. XIII Agricultural Science Congress

## THEME: "Climate Smart Agriculture"

### Inaugural Address:

**Vajubhai Vala**
**Hon'ble Governor of Karnataka.**

### Chief Guest:

**Siddaramaiah, Hon'ble Chief Minister of Karnataka.**

## <u>Presidential Address</u>:

**Krishna Byregowda**
**Minister for Agriculture**

**<u>Date</u>: 21-02-2017 Tuesday, Time: 11.00 AM**

**<u>Place</u>: Dr. Babu Rajendra Prasad International Convention Centre, UAS, GKVK, Bengaluru.**

**<u>Note</u> : Vechicle arrangements has been made from Media Representatives from Cubbon Park, Bengaluru at 10.00 AM on that day.**

**<u>Contact</u>: Dr. K. Shivaramu, Prof. and Senior Information Specialist, Hebbal. Mob: 9972035456**

## <u>ಪತ್ರಿಕಾ ಪ್ರಕಟಣೆ</u>

## ವೈಚಾರಿಕತೆ ದೃಷ್ಟಿಕೋನದಿಂದ ರೈತರ ಸಮಸ್ಯೆ ಅರಿಯಲು ಸಾಧ್ಯ – ಕೃಷಿ ಸಚಿವ ಕೃಷ್ಣಬೈರೇಗೌಡ

**ಬೆಂಗಳೂರು, ಫೆಬ್ರವರಿ 20, (ಕರ್ನಾಟಕ ವಾರ್ತೆ)**

**ರೈತರ ಸಮಸ್ಯೆಗಳನ್ನು ಭಾವನಾತ್ಮಕವಾಗಿ ನೋಡುವುದನ್ನು ಬಿಟ್ಟು ವೈಚಾರಿಕ ಹಿನ್ನೆಲೆಯಲ್ಲಿ ನೋಡಿ ವೈಜ್ಞಾನಿಕವಾಗಿ ಮೂಲಭೂತ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು ಎಂದು ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.**

**ಅವರು ಇಂದು ಬೆಂಗಳೂರಿನಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ ಆವರಣದಲ್ಲಿ, ಕರ್ನಾಟಕ ಕೃಷಿ ಬೆಲೆ ಆಯೋಗವು "ರೈತರ ಆದಾಯ ಮತ್ತು ಕಲ್ಯಾಣ ವೃಧ್ಧಿ ಪ್ರಾಯೋಗಿಕ ಯೋಜನೆ " ಬಗ್ಗೆ ಏರ್ಪಡಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ, ಆಯೋಗದ ಕೈಪಿಡಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.**

ಕೃಷಿ ಬೆಲೆ ಆಯೋಗವು ರೈತರಿಗೆ ಬೆಲೆ ಶಿಫಾರಸ್ಸಿಗೆ ಮಾತ್ರ ಸೀಮಿತವಲ್ಲ, ವಿಸ್ತ್ರತದ ದೃಷ್ಟಿಕೋನ ಹೊಂದಿ, ತೋಟಗಾರಿಕೆ, ಹೈನುಗಾರಿಕೆ ಮೂಲಕ ಹಾಗೂ ತಂತ್ರಜ್ಞಾನ ಬಳಕೆ ಮೂಲಕ ಉತ್ಪಾದನೆ ಹೆಚ್ಚುಮಾಡುವುದು, ಖರ್ಚು ಕಡಿಮೆ ಮಾಡುವುದು, ವಿಮಾ ಸೌಲಭ್ಯದ ಜೊತೆಗೆ, ಭವಿಷ್ಯದಲ್ಲಿಅಥವಾ ಮುಂದಿನ ದಿನಗಳಲ್ಲಿ ಯಾವ ಬೆಳೆಗೆ ಬೆಲೆ ಹೆಚ್ಚು ಸಿಗಬಹುದು, ರೈತರಿಗೆ ಯಾವ ಬೆಳೆ ಬೆಳೆದರೆ ಆದಾಯ ಹೆಚ್ಚಬಹುದು ಎಂಬ ಬಗ್ಗೆ ಸಮಿತಿಗಳ ಮೂಲಕ ತಿಳುವಳಿಕೆ ಮೂಡಿಸಲಾಗುತ್ತಿದೆ. ಸುವರ್ಣ ಕೃಷಿ ಯೋಜನೆ ಮೂಲಕ ರೈತರಿಗೆ ಸ್ವಯಂ ಶಕ್ತಿ ತುಂಬಲು ಪ್ರಯತ್ನಿಸುತ್ತಿದ್ದೇವೆ.

ವ್ಯಯಸಾಯಕ್ಕೆ ಭೂಮಿಯೇ ಇಲ್ಲದ ಎಷ್ಟೋ ರೈತರು ಜಮೀನುದಾರರ ಹತ್ತಿರ ವಾರ/ಗುತ್ತಿಗೆಗೆ ಒಂದು ಎರಡು ಎಕರೆ ಜಮೀನು ಪಡೆದು ವ್ಯವಸಾಯ ಮಾಡುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ, ಸಣ್ಣ ಪ್ರಮಾಣದ ಜಮೀನಿನಲ್ಲಿ ತಂತ್ರಜ್ಞಾನ ಬಳಸಿಕೊಳ್ಳುವುದು ಕಷ್ಟಕರವಾಗಿದೆ. ರಾಜ್ಯದಲ್ಲಿ ರೈತರ ಉತ್ಪಾದನೆ ಕಡಿಮೆ ಇದ್ದು, ಖರ್ಚು ಜಾಸ್ತಿಯಾಗುತ್ತದೆ. ಆದಾಯದ ಶೇ. 30 ರಿಂದ 40 ರಷ್ಟು ಕೂಲಿಗೆ ಗೋಗುತ್ತದೆ.

ಮೂಲಭೂತವಾಗಿ ತಳಮಟ್ಟದಿಂದ ರೈತರ ಆರ್ಥಿಕ ಸುಧಾರಣೆಯಾಗಿ ಬಡತನ ನಿರ್ಮೂಲನೆಯಾಗಬೇಕು. ವ್ಯವಸ್ಥೆಯಲ್ಲಿ ಬದಲಾವಣೆ ತಂದಲ್ಲಿ, ಸಾಮಾಜಿಕ ಬದಲಾವಣೆ ಸಾಧ್ಯ ಎಂದರು. ಕೇಂದ್ರ ಸರ್ಕಾರ ರೂ. 450 ಕೋಟಿ ಬರಪರಿಹಾರಕ್ಕಾಗಿ ಬಿಡುಗಡೆ ಮಾಡಿದ್ದು, ಉಳಿದ ಮೊತ್ತ ಬಿಡುಗಡೆ ಮಾಡಿದ ನಂತರ ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದರು.

ಪ್ರಧಾನ ಭಾಷಣ ಮಾಡಿದ ಖ್ಯಾತ ಕೃಷಿ ಮತ್ತು ಆಹಾರ ನೀತಿ ವಿಮರ್ಶಕರು ಆದ ಡಾ|| ದೇವೇಂದ್ರ ಶರ್ಮ ಅವರು ರೈತರು ಬೆಳೆಯುವ ಬೆಳೆ ಪ್ರಮಾಣ ಹೆಚ್ಚಬೇಕು, ಬೆಳೆಗಾಗಿ ಮಾಡುತ್ತಿರುವ ಖರ್ಚು ಕಡಿಮೆಯಾಗಬೇಕು ಎಂದರು. ಇವತ್ತಿನ ದಿನ ವ್ಯವಸಾಯ ಕ್ಷೇತ್ರ ಬಿಟ್ಟು ಇತರ ಎಲ್ಲಾ ಕ್ಷೇತ್ರಗಳಲ್ಲಿ ಕಾಲಕಾಲಕ್ಕೆ ಸಂಬಳ/ಆದಾಯ ಹೆಚ್ಚಾಗುತ್ತದೆ. ಅದಕ್ಕಾಗಿ ಸರ್ಕಾರ ಸಾವಿರಾರು ಕೋಟಿ ಹಣ ಖರ್ಚುಮಾಡುತ್ತದೆ. ಆದರೆ ರೈತರ ಆದಾಯ ಮಾತ್ರ ವರ್ಷಕ್ಕೆ 20,000 ರೂ. ಗಿಂತ ಹೆಚ್ಚಾಗಿಲ್ಲ. ಇದರಿಂದ ರೈತರ ಆತ್ಮಹತ್ಯೆಯು ನಿಂತಿಲ್ಲ. ಕನಿಷ್ಠ ತಿಂಗಳಿಗೆ 20,000/- ರೂ. ಆದಾಯ ರೈತರಿಗೆ ಸಿಗುವಂತಾಗಬೇಕು ಎಂದು ವಿಷಾದ ವ್ಯಕ್ತಪಡಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆ ಮೂಲಕ ರೈತರ ಆದಾಯ ಹೆಚ್ಚಬೇಕು. ಬೆಳೆಯುವ ಬೆಳೆಗೆ ಸೂಕ್ತ ಬೆಲೆ ಸಿಗಬೇಕು. ಪಂಜಾಬ್ ದೇಶದಲ್ಲೇ ಅತೀ ಹೆಚ್ಚು ಭತ್ತ ಬೆಳೆಯುವ ರಾಜ್ಯ ಆದರೂ ಅಲ್ಲಿ ರೈತರ ಆತ್ಮಹತ್ಯೆ ನಿಂತಿಲ್ಲ. ಕಾರಣ ರೈತರ ಮತ್ತು ಗ್ರಾಹಕರ ಮಧ್ಯೆ ಅಂತರ. ಅದು

ಕಡಿಮೆಯಾಗಬೇಕು. ನೇರವಾಗಿ ಬೆಳೆಗೆ ಸೂಕ್ತ ಬೆಲೆ ಸಿಗುವಂತಾಗಬೇಕು ಎಂದರು.

ಕೃಷಿ ಬೆಲೆ ಆಯೋಗದ ಸದಸ್ಯರಾದ ಹನುಮನಗೌಡ ಅವರು ರೈತರ ಆಶಯದ ಬಗ್ಗೆ ಮಾತನಾಡಿ, ರೈತರು ಗೌರವದಿಂದ ಬಾಳುವಂತಾಗಬೇಕು. ಇವತ್ತು ಹಳ್ಳಿಗಳಲ್ಲಿ ರೈತರ ಮಕ್ಕಳಿಗೆ ಹೆಣ್ಣು ಕೊಡುತ್ತಿಲ್ಲ. ಬ್ಯಾಂಕಿನಲ್ಲಿ ಸಾಲ ಕೊಡುತ್ತಿಲ್ಲ, ರೈತ ಬೆಳೆಯುವ ವಸ್ತುಗಳಿಗೆ ತಕ್ಕ ಬೆಲೆ ಸಿಗುತ್ತಿಲ್ಲ. ರೈತ ಜೋಳ ಬೆಳೆದರೆ ಅದಕ್ಕೆ ಬೆಲೆ ಸಿಗುವುದಿಲ್ಲ ಅದರೆ ಮಾರುಕಟ್ಟೆಯಲ್ಲಿ ಜೋಳದ ಹಿಟ್ಟಿಗೆ ದರ ಹೆಚ್ಚು ಇರುತ್ತದೆ. ಗ್ರಾಹಕರು ಮತ್ತು ಮಾರಾಟಗಾರರ ಎರಡು ರೀತಿಯ ಮಾರುಕಟ್ಟೆಗಳಿವೆ ರೈತ ಮಾರುವ ಪದಾರ್ಥಗಳಿಗೆ ಕನಿಷ್ಠ ಬೆಲೆಯು ಸಿಗುತ್ತಿಲ್ಲ.ಅದರೆ ಅದೇ ವಸ್ತು ಗ್ರಾಹಕನಿಗೆ ಮುಟ್ಟುವ ವೇಳೆಗೆ ಅದರ ಬೆಲೆ ಹೆಚ್ಚಿರುತ್ತದೆ. ಇದು ನಿಲ್ಲಬೇಕು ಸೂಕ್ತ ಬದಲಾವಣೆ ಆಗಬೇಕು ಎಂದರು.

ಐಸೆಕ್ ನಿರ್ದೇಶಕರಾದ ಡಾ|| ಎಂ. ಜಿ. ಚಂದ್ರಕಾಂತ್ ಅವರು ಸ್ವಾಗತಿಸಿದರು. ರೈತ ಮುಖಂಡರುಗಳು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಎಸ್‌ಎಂ/ಇಂದಿರಾ/ಕೆಎಂ

## ಸ್ಪರ್ಧಾತ್ಮಕ ಪರೀಕ್ಷೆ ಕೀ ಉತ್ತರ ಪ್ರಕಟ

ಬೆಂಗಳೂರು, ಫೆಬ್ರವರಿ 20, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಸರ್ಕಾರದ ವಿವಿಧ ಇಲಾಖೆಗಳಲ್ಲಿನ ತಾಂತ್ರಿಕೇತರ ಪದವಿ ಮಟ್ಟದ ವಿದ್ಯಾರ್ಹತೆಯುಳ್ಳ ಹುದ್ದೆಗಳಿಗೆ ಫೆಬ್ರವರಿ 18 ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಕೀ ಉತ್ತರಗಳ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಭ್ಯರ್ಥಿಗಳು ಏಳು ದಿನಗಳೊಳಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಕೀ–ಉತ್ತರಗಳಿಗೆ ನಿಗದಿಪಡಿಸಿದ ದಿನಾಂಕಗಳೊಳಗಾಗಿ ಸ್ವೀಕೃತವಾದ ಆಕ್ಷೇಪಣೆಗಳನ್ನು ವಿಷಯ ತಜ್ಞರಿಗೆ ನೀಡಿ, ಅವರ ಸಲಹೆಯಂತೆ ಸಾಮಾನ್ಯ ಅಧ್ಯಯನ ಹಾಗೂ ಸಂವಹನ ಪತ್ರಿಕೆಯ ಪರಿಷ್ಕೃತ ಕೀ–ಉತ್ತರಗಳನ್ನು ಆಯೋಗದ ವೆಬ್‌ಸೈಟ್ http://kpsc.kar.nic.in/Key Answers ನಲ್ಲಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಸಮಾಜದ ಅಸಮಾನತೆ ವಿರುದ್ಧ ವಚನಗಳ ಮೂಲಕ ಹೋರಾಡಿದವರು ಸರ್ವಜ್ಞರು

ಬೆಂಗಳೂರು, ಫೆಬ್ರವರಿ 20, (ಕರ್ನಾಟಕ ವಾರ್ತೆ)

ಸಮಾಜದ ಅಸಮಾನತೆ ವಿರುದ್ಧ ತಮ್ಮ ನೇರ ಮತ್ತು ನಿಷ್ಠುರ ವಚನಗಳ ಮೂಲಕ ಹೋರಾಡಿದ ಮಹನೀಯರಲ್ಲಿ ಸರ್ವಜ್ಞರು ಅಗ್ರ ಗಣ್ಯರು ಎಂದು ಕನ್ನಡ ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ಹೇಳಿದರು.

ಇಂದು ಕನ್ನಡ ಭವನದ ನಯನ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಸರ್ವಜ್ಞ ಜಯಂತಿಯನ್ನು ಸರ್ವಜ್ಞರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು ಮನುಷ್ಯನನ್ನು ಮನುಷ್ಯನಂತೆ ಕಾಣಬೇಕು, ಎಲ್ಲರಿಗೂ ಸಮಬಾಳು ಸಮಪಾಲು ಎಂದು ಹೇಳುವ ಮೂಲಕ ಸಮಾಜದಲ್ಲಿದ್ದ ಅಸಮಾನತೆ ವ್ಯವಸ್ಥೆಯನ್ನು ಸರ್ವಜ್ಞರು ತಮ್ಮ ವಚನಗಳ ಮೂಲಕ ಕಟುವಾಗಿ ಟೀಕಿಸುತ್ತಿದ್ದರು. ಅವರ ವಚನಗಳು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೂ ಅನ್ವಯವಾಗುತ್ತಿರುವುದು ನೋಡಿದರೆ ಶತಮಾನಗಳೇ ಕಳೆದುಹೋಗಿದ್ದರೂ ನಾವು ಇನ್ನೂ ಬದಲಾಗಿಲ್ಲವೆಂದರು..

ಶತಮಾನಗಳ ಹಿಂದೆ ಸರ್ವಾಧಿಕಾರಿಗಳ ಹಿಡಿತದಲ್ಲಿದ್ದ ಸಮಾಜದ ವ್ಯವಸ್ಥೆ ವಿರುದ್ಧ ತಮ್ಮ ವಚನಗಳ ಮೂಲಕ ಅವರು ಹೋರಾಡಿದರು. ಆದರೆ ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ರಕ್ಷಣೆ, ಆಹಾರ, ವಾಕ್ ಸ್ವಾತಂತ್ರ್ಯಗಳಂತಹ ಅನೇಕ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳಿದ್ದರೂ ಕೂಡ ಇಂದಿಗೂ ಅಸಮಾನತೆ ಮತ್ತು ಜಾತೀಯತೆಯನ್ನು ಸಂಪೂರ್ಣವಗಿ ಹೋಗಲಾಡಿಸಲು ಸಾಧ್ಯವಾಗಿಲ್ಲವೆಂದರು.

ಹಿರಿಯ ವಿಮರ್ಶಕರಾದ ಡಾ. ಎಂ.ಎಸ್. ಆಶಾದೇವಿಯವರು ಮಾತನಾಡಿ ಸರ್ವಜ್ಞರು ಕನ್ನಡ ಸಾಹಿತ್ಯ ಜಗತ್ತಿನ ಲೋಕ ಮೀಮಾಂಸೆಯನ್ನು ಅತ್ಯಂತ ಸರಳವಾಗಿ ಪ್ರತಿಪಾದಿಸಿದ ಕವಿ. 12 ನೇ ಶನಮಾನದ ವಚನಕಾರರ ದಟ್ಟ ಪ್ರಭಾವದ ನಡುವೆಯೂ ಅವರನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತೇವೆ. ಇದಕ್ಕೆ ಕಾರಣ ಅವರ ವಚನಗಳನ್ನು ಓದುವಾಗ ನಮಗೆ ನಮ್ಮ ಒಳದನಿಯೇ ಹೇಳುತ್ತಿದೆಯೇನೋ ಎಂದು ಭಾಸವಾಗುತ್ತದೆ ಎಂದರು.

ಕನ್ನಡ ಜನಮಾನಸದ ಕವಿಯಾಗಿರುವುದಕ್ಕೆ ಅವರು ಇಂದಿಗೂ ನಮಗೆ ಪ್ರಸ್ತುತ ಮಾತ್ರವಲ್ಲ ಅಗತ್ಯ ಮತ್ತು ಅನಿವಾರ್ಯವಾಗಿದ್ದಾರೆ. ಹರಿಹರ ಮತ್ತು ರಾಘವಾಂಕರ ಕಾಲಮಾನದಲ್ಲಿ ವಚನಗಳನ್ನು ರಚಿಸಿದ ಸರ್ವಜ್ಞರನ್ನು ಕನ್ನಡದ ವಿದ್ವಾಂಸರು, ಅವರು ಆರಿಸಿಕೊಂಡಿರುವ ಸಾಹಿತ್ಯ ತ್ರಿಪದಿ ಎಂಬ ಕಾರಣಕ್ಕೆ ಕನ್ನಡ ಜನಪದ ಸಾಹಿತ್ಯದ ಜೊತೆಯಲ್ಲಿ ಸಮೀಕರಿಸಿರುವುದು ಸರಿಯಲ್ಲವೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕುಂಬಾರರ ಸಂಘದ ಅಧ್ಯಕ್ಷ ಕೆ. ಮುನಿಸ್ವಾಮಿ, ಪದಾಧಿಕಾರಿ ಎಸ್.ಟಿ. ನಾಗೇಶ್ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎ. ದಯಾನಂದ ಅವರು ಸ್ವಾಗತಿಸಿದರು.

ಎಸ್‌ಎಂ:ಬಿಜಿಪಿ:ಜೆಪಿಆರ್.

# ಫೆ. 21ರಿಂದ 24ರವರೆಗೆ 13ನೇ ಕೃಷಿ ವಿಜ್ಞಾನ ಕಾಂಗ್ರೆಸ್–2017 ಸಮಾವೇಶ

ಬೆಂಗಳೂರು, ಫೆಬ್ರವರಿ 20, (ಕರ್ನಾಟಕ ವಾರ್ತೆ)

ಕೃಷಿ ವಿಶ್ವವಿದ್ಯಾಲಯವು 13ನೇ ಕೃಷಿ ವಿಜ್ಞಾನ ಕಾಂಗ್ರೆಸ್ – 2017 ಆಚರಣೆಯ ಅಂಗವಾಗಿ ಇದೇ ಪ್ರಥಮ ಬಾರಿಗೆ 'ಹವಾಮಾನ ಚತುರ ಕೃಷಿ' ಕುರಿತು ಕಾರ್ಯಾಗಾರವನ್ನು ಫೆಬ್ರವರಿ 21 ರಿಂದ 24 ರವರೆಗೆ ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಹೆಚ್.ಶಿವಣ್ಣ ತಿಳಿಸಿದರು.

ಇಂದು ಅವರು ಕಾರ್ಯಗಾರ ಕುರಿತು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಈ ಸಮ್ಮೇಳನದಲ್ಲಿ ಹವಾಮಾನ ವೈಪರೀತ್ಯಕ್ಕೆ ಹೇಗೆ ಹೊಂದಿಕೊಳ್ಳುವುದು, ಇದರ ಉಪಶಮನಕ್ಕಾಗಿ ರೈತನು ಅಳವಡಿಸಬೇಕಾದ ನೂತನ ವಿಧಾನಗಳು, ಮಾನವನ ಸಂಪನ್ಮೂಲದ ಸಾಮರ್ಥ್ಯ ವೃದ್ಧಿ, ಹವಾಮಾನ ಬದಲಾವಣೆ ಬಗ್ಗೆ ಯೋಜನೆ, ನೀತಿ ರೂಪಿಸುವುದರ ಕುರಿತು ತಜ್ಞರು ವಿಷಯ ಮಂಡನೆ ಮಾಡಲಿದ್ದಾರೆ ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಫೆಬ್ರವರಿ 21 ರಂದು ಬೆಳಿಗ್ಗೆ 11 ಗಂಟೆಗೆ ಜಿಕೆವಿಕೆಯ ಡಾ. ಬಾಬುರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ಕರ್ನಾಟಕ ರಾಜ್ಯಪಾಲರಾದ ವಾಜುಭಾಯಿ ವಾಲಾ ನೆರವೇರಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಸಚಿವ ಕೃಷ್ಣ ಭೈರೇಗೌಡ ಹಾಗೂ ನವದೆಹಲಿಯ ನೀತಿ ಆಯೋಗದ ಅಧ್ಯಕ್ಷ ಡಾ. ರಮೇಶ್ ಚಾಂದ್ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ.

ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿ ನವದೆಹಲಿ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ ನವದೆಹಲಿ ಇವರ ಸಹಯೋಗದಲ್ಲಿ ಈ ನಾಲ್ಕು ದಿನಗಳ ಸಮ್ಮೇಳನ ಆಯೋಜಿಸಲಾಗಿದ್ದು, ಇದರಲ್ಲಿ ಪ್ರಮುಖ ವಿಷಯಗಳಡಿ ವೈಜ್ಞಾನಿಕ ಕಲಾಪಗಳು, ತಜ್ಞರ ವಿಷಯ ಮಂಡನೆ, ವಸ್ತುಪ್ರದರ್ಶನ ಹಾಗೂ ಗೋಷ್ಠಿಗಳು ನಡೆಯುವುದು ಎಂದರು.

ನವದೆಹಲಿಯ ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿಯ ಅಧ್ಯಕ್ಷರಾದ ಡಾ. ಪಂಜಾಬ್ ಸಿಂಗ್ ಮಾತನಾಡಿ, ಈ ಸಮ್ಮೇಳನದಲ್ಲಿ ಸುಮಾರು 700 ವಿಜ್ಞಾನಿಗಳು, ನೂರಾರು ಕೃಷಿಕರು, ಭಾರತದ ಇತರ ವಿಶ್ವವಿದ್ಯಾಲಯದ ನಿರ್ದೇಶಕರುಗಳು ಭಾಗವಹಿಸಲಿದ್ದು ಹವಾಮಾನ ವೈಪರೀತ್ಯ ಮತ್ತು ಬದಲಾವಣೆ ಕುರಿತ ರೈತರು ಅಳವಡಿಸಬೇಕಿರುವ ಕ್ರಮಗಳ ಬಗ್ಗೆ ತಿಳಿಸಿಕೊಡಲಾಗುವುದು. ಕೃಷಿ ಪರಿಕರಗಳ ಕುರಿತು ಸುಮಾರು 150 ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ನವದೆಹಲಿಯ ಕೃಷಿ ವಿಜ್ಞಾನಿಗಳ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಅಯ್ಯಪ್ಪನ್ ಉಪಸ್ಥಿತರಿದ್ದರು.

ಎಸ್‌ಎಂ;ಕೆಎನ್‌ಕೆ:ಜಿಪಿಆರ್.